ಅವರು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಂಜೆ ಒಳಗೆ ಹೇಳಿಕೆಯನ್ನು ಕೊಡುತ್ತೇವೆ.

ವಿಷಯ: ಗುಲ್ಬರ್ಗಾ ಜಿಲ್ಲಾಪರಿಷತ್ತಿನ ಸದಸ್ಯರ ಕೊಲೆಯಾಗಿರುವ ಬಗ್ಗೆ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯ ಅವ್ಯವಹಾರಗಳು

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾದ್ಯಕ್ಷೆಯವರೆ ನಾನು ಈ ಸದನದ ಅವಧಿಯಲ್ಲಿ ಎರಡು ವಿಚಾರಗಳಲ್ಲಿ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ.

ಒಂದು ಗುಲ್ಬರ್ಗಾದಲ್ಲಿ ನಮ್ಮ ಪಕ್ಷದ ಪರಿಷತ್ತಿನ ಸದಸ್ಯರಾದ.....

ಉಪಾದ್ಯಕ್ಷೆಯವರು : ತಾವು ಕಾಲಿಂಗ್ ಅಟೆನ್‌ಷನ್‌ನನ್ನು ಹಾಕಿದ್ದೀರಿ. ಆದರೆ ಇವತ್ತು ಯಾವುದೂ ಕಾಲಿಂಗ್ ಅಟೆನ್‌ಷನ್ ಇಲ್ಲ. ಇವತ್ತು ಬಿಸಿನೆಸ್‌ಗೆ ಹಾಕಿಲ್ಲ.

ಶ್ರೀ ಸಿ. ಬೈರೇಗೌಡ : ನಾನು ಕಳುಹಿಸಿದ್ದೇನೆ. ನನಗೆ ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ಅವಕಾಶ ಇಲ್ಲಿ ಸಿಗಲಿಲ್ಲ. ಇವತ್ತು ಅಲ್ಲಿ ಏನಾಗಿದೆ ಎಂದರೆ....

ಉಪಾದ್ಯಕ್ಷೆಯವರು : ಇವತ್ತು ಕಾಲಿಂಗ್ ಅಟೆನ್‌ಷನ್ನು ಹಾಕಿದ್ದೀರಿ. ಅದು ನಾಳೆ ಬರಬಹುದು. ನನಗೆ ಗೊತ್ತಿಲ್ಲ.

ಶ್ರೀ ಸಿ. ಬೈರೇಗೌಡ : ಅದನ್ನು ನಾನು ಪ್ರಾರಂಭದಲ್ಲಿಯೇ ಕಳುಹಿಸಿರತಕ್ಕಂಥದ್ದು. ಅಲ್ಲಿ ಯಾರು ಅಪರಾಧವನ್ನು ಮಾಡಿರತಕ್ಕಂಥದು ಅಪಾರಾಧಿಗಳು ಯಾರು ಎನ್ನುತಕ್ಕಂಥದ್ದು ಕೂಡಾ.....

ಉಪಾದ್ಯಕ್ಷೆಯವರು : ಸಂಬಂಧಪಟ್ಟ ಮಂತ್ರಿಗಳೂ ಇಲ್ಲ.

ಶ್ರೀ ಸಿ. ಬೈರೇಗೌಡ : ಕಣ್ಣಾರೆ ಕಂಡಿರತಕ್ಕಂಥವರು ಕೂಡಾ ಹೇಳಿದ್ದಾರೆ. ಅವರು ಉಪಯೋಗಿಸಿರುರ ಜೀಪು ಕೂಡಾ ಯಾವುದು ಎನ್ನತಕ್ಕಂಥದ್ದು ಆ ಜೀಪಿನ ನಂಬರ್ ಅದನ್ನು ತಿಳಿಸಿದ್ದಾರೆ. ಮತ್ತೆ ಅಪರಾಧಿಗಳು ಯಾರು ಎಂಬುದನ್ನು ಎಂದು ಹೇಳಿದ್ದಾರೆ. ಈಗ ಆ ಜೀಪ್ ಏನಾಗಿದೆ, ಇದು ಕೊಲೆಯಾದ ಮೇಲೆ ಆ ಜೀಪನ್ನು ಮಾಲೀಕತ್ವವನ್ನೇ ಬದಲಾಯಿಸತಕ್ಕಂಥ ಒಂದು ವ್ಯವಸ್ಥೆ ಕೂಡ ನಡೆದಿದೆ. ಆ ಜೀಪ್ ಯಾರ ಹೆಸರಿನಿಂದ ಯಾರ ಹೆಸರಿಗೆ ಬದಲಾವಣೆಯಾಗಿದೆ ಎಂದರೆ, ಆ ಮಾಹಿತಿಯನ್ನು ಕೊಡುವುದಕ್ಕೆ ಇವತ್ತು ಒತ್ತಾಯವನ್ನು ತಂದರೂ ಕೂಡ ಅದನ್ನು ಕೊಡುತ್ತಿಲ್ಲ. ಮತ್ತೆ ಅಲ್ಲಿರತಕ್ಕಂಥ ಅಪರಾಧಿಗಳು, ಅಪರಾಧಿಗಳನ್ನು ಕಣ್ಣಾರೆ ಬೆಳಿಗ್ಗೆಯಿಂದ ಸಂಜೆಯವರೆಗೆ ಪೋಲೀಸರ ಎದುರುಗಡೆಯೇ ಓಡಾಡಿಕೊಂಡಿದ್ದರೂ ಸಹ ಅವರನ್ನು ದಸ್ತಗಿರಿ ಮಾಡತಕ್ಕಂಥ ಕೆಲಸ ಸಹಾ ಸರ್ಕಾರದಿಂದ ಮಾಡಿಲ್ಲ. ಇದಕ್ಕೆ ಪ್ರಬಲವಾದಂತಹ ರಾಜಕೀಯ ಕಾರಣ ಇದೆ ರಾಜಕೀಯ ಕಾರಣದಿಂದಲೇ ಕೊಲೆ ಆಗಿದೆ. ಕೊಲೆಯಾಗಿರುವುದನ್ನು ಮುಚ್ಚಿಹಾಕುವುದು ಬಹಳ ರಾಜಕೀಯ ಪ್ರವೃತ್ತಿಯಿಂದಲೇ ನಡೆಯುತ್ತಿದೆ.

ಉಪಾದ್ಯಕ್ಷೆಯವರು : ತಾವು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿದ್ದೀರಿ. ಅದನ್ನು ನೋಡೋಣ. ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ

ಶ್ರೀ ಸಿ. ಬೈರೇಗೌಡ : ಇದನ್ನು ಇಲ್ಲಿಯವರೆಗೆ ಪ್ರಸ್ತಾಪ ಮಾಡಲು ಅವಕಾಶ ಸಿಕ್ಕಿಲ್ಲ. ಇವತ್ತು ತಪ್ಪಿದರೆ ನಾಳೆ ಈ ಸದನ ಮುಗಿಯುತ್ತದೆ. ಇವರು ಕೊಲೆ ಮಾಡಿದರೂ ಸಹಿತ ಇವರು ದಕ್ಕಿಸಿಕೊಂಡು ಹೋಗುತ್ತಾರೆ. ಅವರನ್ನು ದಸ್ತಗಿರಿ ಮಾಡತಕ್ಕದ್ದಕ್ಕೆ ಅವಕಾಶ ಇಲ್ಲ. ಅಂದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ? ಎಷ್ಟರಮಟ್ಟಿಗೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಇದೆ ಅನ್ನತಕ್ಕದ್ದು ತೋರಿಸುತ್ತದೆ. ದಯವಿಟ್ಟು ಅದಕ್ಕೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಏನೇನು ಆಗಿದೆ ಎಂಬುದರ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದೇನೆ. ಮಂತ್ರಿಗಳು ಸಹ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅವರು ಸಹ ಇಲ್ಲಿಯೇ ಇದ್ದಾರೆ. ವಿಚಾರಣೆ ಮಾಡಿ ವರದಿಯನ್ನು ಕೊಡುತ್ತೇವೆ ಅನ್ನತಕ್ಕ ಮಾತನ್ನು ಹೇಳಿದಾದರೆ. ತಾವು ವಿಚಾರಣೆ ಮಾಡಬೇಕು. ವಿಚಾರಣೆಯನ್ನು ಮಾಡದೇ ಯಾರನ್ನೂ ಶಿಕ್ಷೆಗೆ ಒಳಪಡಿಸುವುದು ಅಥವಾ ಯಾರಮೇಲೂ ಆರೋಪ ಮಾಡುವುದು ಸರಿಯಲ್ಲ. ಮಂತ್ರಿಗಳು ಆಶ್ವಾಸನೆಯನ್ನು ಸಹ ಕೊಟ್ಟಿದ್ದಾರೆ. ಮಂತ್ರಿಗಳು ಸಹ ಇಲ್ಲಿದ್ದಾರೆ. ಅದು ಏನಾಯಿತು ವಿಚಾರಣೆ ಆಗಿದ್ದರೆ ವರದಿಯನ್ನು ಕೊಟ್ಟಿದ್ದಾರೆಯೇ? ವರದಿ ಕೊಟ್ಟಿದ್ದರೆ ಏನೇನು ಆರೋಪಗಳು ಸಾಬೀತಾಗಿದೆ. ಆ ವರದಿಯ ಪ್ರತಿಯನ್ನು ನಮಗೂ ಕೂಡ ಕೊಡತಕ್ಕದ್ದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿದೆ. ಅವರಿಂದ ತಾವು ನಮಗೆ ಉತ್ತರವನ್ನು ಕೊಡಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೊಲೆ ಪ್ರಕರಣದ ಬಗ್ಗೆ ಏನು ಹೇಳಿದ್ದಾರೆ, ಅದರ ಬಗ್ಗೆ ಸದನದಲ್ಲಿಯೂ ಕೂಡ ಎತ್ತಿದಮೇಲೆ ಅದಕ್ಕೆ ಉತ್ತರವನ್ನು ಕೂಡ ಕೊಟ್ಟಾಗಿದೆ. ಯಾವುದಾದರೂ ನಿಯಮದ ಪ್ರಕಾರ ಸೂಚನೆ ಬಂದರೆ ನಾವು ಉತ್ತರವನ್ನು ಕೊಡಬಹುದು. ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ತನಿಖೆ ಈಗಾಗಲೇ ನಡೆಯುತ್ತಿದೆ ಅಕ್ಟೋಬರ್ ಒಂದನೇ ವಾರದಲ್ಲಿ ಕುಲಪತಿಗಳಾದ ರಾಜ್ಯಪಾಲರಿಗೆ ವರದಿಯನ್ನು ಸಲ್ಲಿಸುತ್ತಾರೆ.

ಶ್ರೀ ಸಿ. ಬೈರೇಗೌಡ : ನಾನು ಕೊಲೆಯಾಗಿರುವ ಬಗ್ಗೆ ನಿಯಮದ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಅದನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಸಿಗಲಿಲ್ಲ ಅನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ನಿಯಮಾವಳಿಯನ್ನು ಪ್ರಶ್ನೆ ಮಾಡುತ್ತಾ ಹೋದರೆ ನಾವು ಇದಕ್ಕೆ ಏನು ಹೇಳುವುದು?

ಉಪಾಧ್ಯಕ್ಷೆಯವರು : ಅವರು ರಿಪೋರ್ಟ್ ಬರಲಿ ಹೇಳುತ್ತೇನೆ ಎಂದು ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾನು ಇದನ್ನು ಅಷ್ಟು ಸುಲಭವಾಗಿ ಬಿಡುವುದಿಲ್ಲ. ಕೊಲೆ ಆದರೂ ಕೂಡ ಚರ್ಚೆ ಮಾಡಲಿಕ್ಕೆ ಅವಕಾಶ ಇಲ್ಲ. ಸರ್ಕಾರ ಸುಮ್ಮನೆ ಕುಳಿತಿದೆ ಅಂದರೆ ಅಲ್ಲಿ ಏನಾಗಬೇಕು? ಒಬ್ಬ ಜಿಲ್ಲಾಪರಿಷತ್ತಿನ ಸದಸ್ಯರಿಗೆ ಜಿಲ್ಲಾಪರಿಷತ್ತಿನ ಸ್ಥಾಯಿ ಸಮಿತಿಯ ಅಧ್ಯಕ್ಷರಿಗೆ ರಕ್ಷಣೆ ಇಲ್ಲದೆ ಹಗಲು 11-00 ಗಂಟೆಯಲ್ಲಿ ಕೊಲೆಯಾಗಿದೆ, ಇದನ್ನು ನೋಡಿರತಕ್ಕವರು ಇದ್ದಾರೆ. ಸಾಕ್ಷಿಗಳು ಇದ್ದಾವೆ. ನೇರವಾಗಿ ಇಂತಹ ಆರೋಪಿಗಳೆಂದು ದೂರು ಕೊಟ್ಟಿದ್ದಾರೆ. ಇಷ್ಟೆಲ್ಲಾ ಆದರೂ ಇಲ್ಲಿಯವರೆಗೆ ಯಾರು ಕೆಲಸಕ್ಕೆ ಬಾರದೆ ಇರುವ ಒಬ್ಬರೋ ಇಬ್ಬರನ್ನು ಅವರು ದಸ್ತಗಿರಿ ಮಾಡಿದ್ದಾರೆ. ಉಳಿದಂತಹ ಪ್ರಮುಖವಾದ ಆರೋಪಿಗಳು ಯಾರಿದ್ದಾರೆ ಅವರು ರಾಜಕೀಯದ ಬೆಂಬಲವನ್ನು ಪಡೆದಿರುವಂತವರು. ಅವರನ್ನು

ಮುಟ್ಟತಕ್ಕಂಥಹ ಕೆಲಸ ಆಗಿಲ್ಲ. ರಾಜಕೀಯ ಕಾರಣಕ್ಕೋಸ್ಕರ ಕೊಲೆ ಮಾಡಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ಇರತಕ್ಕ ಪ್ರಯತ್ನ ನಡೆಯುತ್ತಿದೆ.

ಉಪಾಧ್ಯಕ್ಷೆಯವರು : ನಾನು ಶ್ರೀ ಈಶ್ವರಪ್ಪನವರನ್ನು ಕರೆದಿದ್ದೇನೆ. ನೀವು ಏನು ಮತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ.

ವಿಷಯ: ಸೊರಬ ತಾಲ್ಲೂಕಿನ ಮರೂರು ಗ್ರಾಮದಲ್ಲಿ ನಡೆದ ಘಟನೆ

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಮುಖ್ಯಮಂತ್ರಿ ಸೊರಬ ಕ್ಷೇತ್ರದಲ್ಲಿ ಒಂದು ದಂಗುಬಡಿಯುವಂತ ಘಟನೆ ನಡೆದಿದೆ. ಎರಡನೇಯ ತಾರೀಖು ಸೊರಬ ತಾಲ್ಲೂಕು ಮರೂರು ಗ್ರಾಮದಲ್ಲಿ ಸಾಗುವಳಿ ನಾಟ್ ಕತ್ತರಿಸುವ ವಿಚಾರವನ್ನು ಸಾಗರದ ಪತ್ರಕರ್ತರಾದ ಶ್ರೀಯುತ ರಾಮಚಂದ್ರಪ್ಪ ಮತ್ತು ಸೊರಬದ ರಾಮಚಂದ್ರಶೆಟ್ಟರಿಗೆ ಈ ವಿಚಾರ ಗೊತ್ತಾಗಿ ಅಲ್ಲಿನ ಡಿ.ಎಫ್.ಓ.ರವರಿಗೆ ವಿಚಾರವನ್ನು ತಿಳಿಸಿದರು. ಡಿ.ಎಫ್.ಓ.ರವರು ಸ್ಪಾಟ್‌ಗೆ ಹೋಗಿ ನೋಡಿದರು. ಸಾಗುವಾನಿ ಮರವನ್ನು ಕಡಿದಿದ್ದು ಹೌದು. ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ತೆಗೆದುಕೊಂಡ ಯಾರು ಸಾಗುವಾನಿ ಮರಗಳನ್ನು ಕಟ್ಟುಮಾಡಿದ್ದರೋ ಆ ವ್ಯಕ್ತಿಯ ಮೇಲೆ ಕೇಸು ಹಾಕಿದರು. ಆ ವ್ಯಕ್ತಿಯ ಹೆಸರು ಬಂಡಾರಿ ದುಗ್ಗಪ್ಪ.

ಉಪಾಧ್ಯಕ್ಷೆಯವರು : ಈಗ ವಿವರಕ್ಕೆ ಹೋಗಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷೆಯವರೆ ನಾನು ಏಕೆ ಹೇಳುವುದಕ್ಕೆ ಹೊರಟಿದ್ದೇವೆಂದರೆ ಅದನ್ನು ಕಾಂಗ್ರೆಸ ಮಂಡಲ್ ಪಂಚಾಯಿತಿಯ ಸಧಸ್ಯ ಆ ವ್ಯಕ್ತಿಯ ಮೇಲೆ ಕೇಸ್ ಹಾಕಿದ್ದರು. ಮಾರನೆ ದಿನ ಬೇರೆ ಕಡೆ ಇದೇ ರೀತಿ ಸಾಗುವಾನಿ ಮರವನ್ನು ಕಟ್ಟು ಮಾಡುತ್ತಿದ್ದರು. ಪತ್ರಕರ್ತರು ಅಲ್ಲಿ ಫೋಟೋಗ್ರಾಫರ್ ಸಮೇತ ಹೋದರು. ಅಲ್ಲಿ ಹೋದಾಗ ಇವರು ಯಾರೂ ಇರಲಿಲ್ಲ, ಎಲ್ಲಾ ಓಡಿಹೋದರು. ತಕ್ಷಣ ಇವರು ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದಾಗ ಯಾರು ಈ ಸಾಗುವಾನಿ ಮರವನ್ನು ಕಟ್ಟುಮಾಡುತ್ತಿದ್ದರೋ ಆ ವ್ಯಕ್ತಿ ಪೋಲೀಸಿನವವರಿಗೆ ಕಂಪ್ಲೈಯಿಂಟ್ ಕೊಟ್ಟಿದ್ದಾರೆ. ಇವರನ್ನು ಅರೆಸ್ಟ್ ಮಾಡಿ ಎಂದು ಆದರೆ ಪತ್ರಕರ್ತರು.....

ಶ್ರೀ ಆರ್.ಎನ್. ನಾಯಕ್ : ಯಾವ ನಿಯಮದ ಪ್ರಕಾರ ಅವರು ಮಾತನಾಡುತಿದ್ದಾರೆ. ಅದನ್ನು ಕೇಳಿ ಅವರು ಮಾತನಾಡುವುದಕ್ಕೆ ಬರೆದು ಕಳುಹಿಸಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಬರೆದು ಕಳುಹಿಸಿ ಅವರ ಪರ್ಮಿಷನ್ ತೆಗೆದುಕೊಂಡಿದ್ದೇನೆ.

ಉಪಾಧ್ಯಕ್ಷೆಯವರು : ಈಗ ಅದರ ವಿವರಗಳನ್ನು ಕಳುಹಿಸಿಕೊಡಿ. ಬೇರೆ ಯಾವುದಾದರೂ ರೂಪದಲ್ಲಿ ಇವನ್ನು ಎತ್ತಿ ಆಗ ಸರ್ಕಾರದಿಂದ ಉತ್ತರ ಬರಲಿಕ್ಕೆ ಸಾಧ್ಯವಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸರ್ಕಾರ ನೋಡಬೇಕು ಪತ್ರಕರ್ತರಿಗೆ ಈ ರೀತಿಯ ಪರಿಸ್ಥಿತಿಯಾದರೆ ಹೇಗೆ? ಬೇರೆಯವರ ಗತಿ ಏನು? ಪತ್ರಕರ್ತರ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿರುವುದು ಇದು ಗಂಭೀರವಾದ ಪರಿಸ್ಥಿತಿ.

(ಗೊಂದಲ)